## **ಭದ್ರಾವತಿಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ.**

**ಸಿ.ಸಿ.ಸಂಖ್ಯೆ: 6259/2022**

ಫಿರ್ಯಾದಿಃ ಹೊಳೆ ಹೊನ್ನೂರು ಪೊಲೀಸ್ ಠಾಣೆ, ಭದ್ರಾವತಿ.

– ವಿರುದ್ಧ –

ಆರೋಪಿತರುಃ 1. ಗೀತಾ, ಕೊಂ ಸಿದ್ದಪ್ಪ, 48 ವರ್ಷ,
2. ನೇತ್ರಾವತಿ, **(ಮೃತ ಪಟ್ಟಿರುತ್ತಾರೆ)**
3. ಸುಮಿತ್ರ, ಬಿನ್ ಲೇಟ್ ಮಲ್ಲೇಶಪ್ಪ, 40 ವರ್ಷ,
4. ಲತಾ, ಬಿನ್ ಲೇಟ್ ಮಲ್ಲೇಶಪ್ಪ, 46 ವರ್ಷ,
5. ಸುಜಾತ, ಬಿನ್ ಲೇಟ್ ಬಸವರಾಜಪ್ಪ, 49 ವರ್ಷ,

1 ರಿಂದ 5 ನೇ ಆರೋಪಿತರ ವಾಸಃ ಅರ್ಕೆರೆ ನಾಗೋಲೆ, ಹಳ್ಳಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

6. ಚೇತನ ಬಿನ್ ಬಸವರಾಜಪ್ಪ, 25 ವರ್ಷ,
ವಾಸಃ ಕೂಡ್ಲಿಗೆರೆ ಗ್ರಾಮ, ಭದ್ರಾವತಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

### **ದೋಷಾರೋಪಣೆ**

ನಾನು ರವಿ ಕುಮಾರ ವಿ. ಬಿ.ಎ.ಎಲ್., ಎಲ್.ಎಲ್.ಬಿ. ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳಾದ ನಾನು, ಈ ಮೂಲಕ ಮೇಲೆ ಹೆಸರಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಮೊದಲನೇಯದಾಗಿ, ಹೊಳೆ ಹೊನ್ನೂರು ಪೋಲಿಸ್ ಠಾಣಾ ವ್ಯಾಪ್ತಿಯ ಭದ್ರಾವತಿ ತಾಲ್ಲೂಕಿನ ಅಕರೆರೆ ನಾಗೋಲೆ ಗ್ರಾಮದ ಮಲ್ಲೇಶಪ್ಪ ಬಿನ್ ಬಸಪ್ಪ ರವರು ಮನೆಯ ಮುಂಭಾಗದ ಮಣ್ಣಿನ ಕಚ್ಚಾ ರಸ್ತೆಯಲ್ಲಿ ದಿಃ 08.01.2021 ರಂದು ಬೆಳಗ್ಗೆ 08.00 ಗಂಟೆಗೆ ಸಾಕ್ಷಿ–1 ಅನಿತಾ ಮತ್ತು ಸಾಕ್ಷಿ–2 ಯಶೋದ ರವರು ಮನೆ ಕಡೆಗೆ ನಡೆದುಕೊಂಡು ಹೋಗುತ್ತಿರುವಾಗ ಈ ಹಿಂದೆ ಗಲಾಟೆ ಮಾಡಿ ತೊಂದರೆ

ನೀಡಿರುತ್ತಾರೆ ಎಂಬು ಉದ್ದೇಶ ಇಟ್ಟುಕೊಂಡು, 1, 3, 4, 5, 6 ಮತ್ತು 2 ನೇ ಮೃತ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಅಕ್ರಮ ಕೂಟದ ಸದಸ್ಯರಾಗುವುದರ ಮೂಲಕ ಭಾ.ದಂ.ಸಂ.ಕಲಂ. 143 ಸಹವಾಚಕ ಕಲಂ. 149ರ ಅಡಿಯಲ್ಲಿ 1, 3, 4, 5, 6 ನೇ ಆರೋಪಿಗಳಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು,

2 ನೇಯದಾಗಿ ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ 1, 3, 4, 5, 6 ಮತ್ತು 2 ನೇ ಮೃತ ಆರೋಪಿತರು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ದೊಂಬಿ ಮಾಡುವುದರ ಮೂಲಕ ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ. 149ರ ಅಡಿಯಲ್ಲಿ 1, 3, 4, 5, 6 ನೇ ಆರೋಪಿಗಳಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

3 ನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ 1, 3, 4, 5, 6 ಮತ್ತು 2 ನೇ ಮೃತ ಆರೋಪಿತರು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸಾಕ್ಷಿ-1 ಅನಿತಾ ಮತ್ತು ಸಾಕ್ಷಿ-2 ಯಶೋದ ರವರಿಗೆ ಅಕ್ರಮವಾಗಿ ತಡೆದು ನಿಲ್ಲಿಸಿರುತ್ತೀರಿ ಆದ್ದರಿಂದ ಭಾ.ದಂ.ಸಂ.ಕಲಂ. 341 ಸಹವಾಚಕ ಕಲಂ. 149ರ ಅಡಿಯಲ್ಲಿ 1, 3, 4, 5, 6 ನೇ ಆರೋಪಿಗಳಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

4 ನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ 1, 3, 4, 5, 6 ಮತ್ತು 2 ನೇ ಮೃತ ಆರೋಪಿತರು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸಾಕ್ಷಿ-1 ಅನಿತಾ ಮತ್ತು ಸಾಕ್ಷಿ-2 ಯಶೋದ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಮನಃ ಶಾಂತಿಗೆ ಭಂಗ ಉಂಟು ಮಾಡುವುದರ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ. 149ರ ಅಡಿಯಲ್ಲಿ 1, 3, 4, 5, 6 ನೇ ಆರೋಪಿಗಳಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

5 ನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ 1, 3, 4, 5, 6 ಮತ್ತು 2 ನೇ ಮೃತ ಆರೋಪಿತರು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸಾಕ್ಷಿ–1 ಅನಿತಾ ಮತ್ತು ಸಾಕ್ಷಿ–2 ಯಶೋದ ರವರಿಗೆ ಕೈಗಳಿಂದ ಹೊಡೆದು ಎಳೆದಾಡಿ ಸಾಮಾನ್ಯ ಸ್ವರೂಪದ ಗಾಯ ಉಂಟುಮಾಡುವುದರ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ. 149 ರ ಅಡಿಯಲ್ಲಿ 1, 3, 4, 5, 6 ನೇ ಆರೋಪಿಗಳಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

ಕೊನೇಯದಾಗಿ , ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ 1, 3, 4, 5, 6 ಮತ್ತು 2 ನೇ ಮೃತ ಆರೋಪಿತರು ಕೃತ್ಯ ಎಸಗುವ ಸಮಾನ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಸಾಕ್ಷಿ–1 ಅನಿತಾ ಮತ್ತು ಸಾಕ್ಷಿ–2 ಜೀವ ಬೆದರಿಕೆ ಹಾಕಿರುವುದರ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ. 149 ರ ಅಡಿಯಲ್ಲಿ 1, 3, 4, 5, 6 ನೇ ಆರೋಪಿಗಳಾದ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದೂ,

ಹಾಗೂ ನೀವೆಲ್ಲರೂ ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

ದಿನಾಂಕಃ 07–08–2024 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ.